ಶ್ರೀ ಯು. ಬಿ. ಬಣಕಾರ್: ಸರ್ಕಾರದ ಗಮನಕ್ಕೆ ಯಾವ ರೀತಿ ತರಬೇಕೆಂದು ಹೇಳಲಿಲ್ಲ

10.50 ಪಿ.ಎಂ.

ಅಧ್ಯಕ್ಷರು : ನೀವು ಆ ಕೆಲಸವನ್ನು ಮಾಡಿಯೂ ಅವರ ಗಮನಕ್ಕೆ ಬಂದಿಲ್ಲ ಎಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಹೇಳಬೇಕು..

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ತೆಗೆದುಕೊಳ್ಳಲು ಬರೆದಿದ್ದಾರೆ. ಅದು ಅಧಿಕಾರಿಗಳು ಗಮನಕ್ಕೆ ಹೋದಮೇಲೆ ಆ ಪ್ರಸ್ತಾವನೆ ಸರ್ಕಾರ ಮುಂದೆ ಇದೆ ಎಂದರೂ ಸಹ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರೆ ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು. ಇದು ಈ ರೀತಿಯಾಗುತ್ತಿರುವುದು ಎರಡನೆ ಬಾರಿ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಈ ಸಲ ಮಂಜೂರಾತಿ ಸಮಯದಲ್ಲಿ ಅವರಿಗೆ ಆಕ್ಷೇಪಣೆಗೆ ಅವಕಾಶ ಕೊಡುವುದಿಲ್ಲ.

ಗದಗ್‌ನಲ್ಲಿ ಜಿ.ಟಿ.ಟಿ.ಸಿ. ಕೇಂದ್ರದ ಪ್ರಾರಂಭ

564 - ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಗದಗ ನಗರ ಹಾಗೂ ಸುತ್ತ ಮುತ್ತಲ ಪ್ರದೇಶದಲ್ಲಿ ಜಿ:ಟಿ.ಟಿ.ಸಿ. ಕೇಂದ್ರ ತೆರೆಯ ಬೇಕೆಂಬ ಬೇಡಿಕೆ ಸರಕಾರದ ಮುಂದಿದೆಯೇ?*

2. *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಈ ಬಗ್ಗೆ ಬೇಡಿಕೆಯು ಸರ್ಕಾರದ ಮುಂದೆ ಇದೆ.

ಆ) ಪರಿಶೀಲಿಸಲಾಗುತ್ತಿದೆ.

ಶ್ರೀ ಡಿ. ಆರ್. ಪಾಟೀಲ್ : ಕಳೆದ ಎರಡು ವರ್ಷಗಳಿಂದ ಪರಿಶೀಲನೆ ಹಂತದಲ್ಲಿರುವ ಈ ಪ್ರಸ್ತಾವನೆಯನ್ನು ಈಗಲಾದರೂ ಗದಗ್ ಜಿಲ್ಲಾ ಕೇಂದ್ರವಾಗಿದ್ದರಿಂದ ತರಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕನಿಷ್ಟ ಮುಂದಿನ ಶೈಕ್ಷಣಿಕ ವರ್ಷದಿಂದಲಾದರೂ ಈ ಜಿಟಿಟಿಸಿ ಕೇಂದ್ರವನ್ನು ಗದಗನಲ್ಲಿ ಕೈಗೊಳ್ಳಲು ಬೇಕಾಗುವ ಎಲ್ಲಾ ಸೂಕ್ತ ಕ್ರಮಗಳನ್ನು ಮಂತ್ರಿಗಳು ಕೈಗೊಳ್ಳಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್ : ಮಾನ್ಯ ಅಧ್ಯಕ್ಷರೇ, ಗದಗ್‌ನಲ್ಲಿ ಜಿಟಿಟಿಸಿ ಕೇಂದ್ರವನ್ನು ಸ್ಥಾಪಿಸಬೇಕು ಎನ್ನತಕ್ಕ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಆದರೆ ಬೇಡಿಕೆ ಇದೆ. ಈ ಬೇಡಿಕೆ ಗದಗ ಮತ್ತು ಹರಿಹರದಿಂದಲೂ ಇದೆ. ನಾವು ಈಗ ಹೈಟೆಕ್ ಏರಿಯಾಕ್ಕೆ ಹೋಗುತ್ತಿದ್ದೇವೆ. ಇವತ್ತು ನಮಗೆ

ಗುರುತರವಾದ ನುರಿತ ಕುಶಲ ಕರ್ಮಿಗಳ ಅವಶ್ಯಕತೆ ಹೈಟೆಕ್ ಏರಿಯಾದಲ್ಲಿ ಇದೆ. ಆದ್ದರಿಂದ ಇದನ್ನು ನಾವು ಮನಗಂಡು ಜಿಟಿಟಿಸಿ ಎನ್ನತಕ್ಕ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕು ಎನ್ನತಕ್ಕ ಉದ್ದೇಶ ಸರ್ಕಾರಕ್ಕೆ ಇದೆ. ಇದಕ್ಕೆ ಸಹಾಯವನ್ನು ಯಾಚಿಸಿ ಕೇಂದ್ರ ಸರ್ಕಾರಕ್ಕೆ ಒಂದು ಪ್ರಪೊಸಲ್‌ನ್ನು ಕಳಿಸುವವರಿದ್ದೇವೆ. ಆ ಸಂದರ್ಭದಲ್ಲಿ ಆದ್ಯತೆ ಮೇರೆಗೆ ಗದಗ ಒಂದು ಜಿಲ್ಲೆಯಾದರಿಂದ ಅಲ್ಲಿ ಒಂದು ಜಿಟಿಟಿಸಿ ಕೇಂದ್ರವನ್ನು ತೆರೆಯಲು ನಾವು ಖಂಡಿತ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ನೀವು ಕೇಳಿದ್ದು ಅದೇ, ಅವರು ಹೇಳಿದ್ದು ಅದೇ ಆಯಿತಲ್ಲಾ ಬಿಡಿ. ಮತ್ತೇನು?

ಶ್ರೀ ಡಿ. ಆರ್. ಪಾಟೀಲ್ : ಆದ್ಯತೆ ಮೇರೆಗೆ ಎಂದು ಹೇಳಿದ್ದಾರೆ. ಪ್ರಥಮ ಆದ್ಯತೆ ಕೊಟ್ಟರೆ ಸಂತೋಷವಾಗುತ್ತದೆ.

ಅಧ್ಯಕ್ಷರು : ಆಯಿತು ಬಿಡಿ ಅವರು ಮಾಡುತ್ತಾರೆ. ಮೊದಲೆಲ್ಲಾ ಅವರನ್ನು ಮಾನಸಿಕವಾಗಿ ತಯಾರು ಮಾಡಿದ್ದೀರಲ್ಲಾ.

ಹುಬ್ಬಳ್ಳಿ ನಗರದಲ್ಲಿ ಸಾರ್ವಜನಿಕರ ಶೌಚಾಲಯಗಳು.

565 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದಲ್ಲಿರುವ ಪುರುಷ ಹಾಗೂ ಮಹಿಳಾ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಎಷ್ಟು?*

ಆ) *ಅವುಗಳ ನಿರ್ವಹಣೆಯನ್ನು ಯಾರಿಗೆ ವಹಿಸಿಕೊಡಲಾಗಿದೆ, ಯಾವ ಕರಾರಿನ ಮೇಲೆ ವಹಿಸಿಕೊಡಲಾಗಿದೆ?*

ಇ) *ಕಳೆದ 3 ವರ್ಷಗಳಲ್ಲಿ ನಗರಪಾಲಿಕೆಯವರು ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಪುರುಷರ ಮತ್ತು ಮಹಿಳೆಯರ ಸಾರ್ವಜನಿಕ ಶೌಚಾಲಯಗಳು ಒಟ್ಟು 1337.

	ಬ್ಲಾಕುಗಳು			ಸೀಟುಗಳು		
	ಪು	ಮ	ಒಟ್ಟು	ಪು	ಮ	ಒಟ್ಟು
ಹುಬ್ಬಳ್ಳಿ	73	67	140	460	440	900
ಧಾರವಾಡ	41	26	67	237	200	437
ಒಟ್ಟು	**114**	**93**	**207**	**697**	**640**	**1337**